# ಅಟ್ರಾಸಿಟಿ




**ವರ್ತಮಾನದ** ವಿದ್ಯಮಾನಗಳನ್ನು ಕಲಾತ್ಮಕ ಚೌಕಟ್ಟಿನೊಂದಿಗೆ ಕಥೆಗಳನ್ನಾಗಿಸುವುದರಲ್ಲಿ ಗುರುಪ್ರಸಾದ್ ಕಂಟಲಗೆರೆ ಸಾಕಷ್ಟು ಯಶಸ್ಸು ಪಡೆದಿರುವ ಕಥೆಗಾರರು. ಅವರ 'ಗೋವಿನಜಾಡು' ಹಾಗೂ 'ಕೆಂಡದ ಬೆಳುದಿಂಗಳು' ಓದುಗ ಹಾಗೂ ವಿಮರ್ಶೆ – ಎರಡೂ ವಲಯದ ಮೆಚ್ಚುಗೆ ಪಡೆದಿರುವ ಕಥಾಸಂಕಲನಗಳು. ದಲಿತ ಸಮುದಾಯದ ತುದಿ ಮೊದಲಿಲ್ಲದ ಸಂಕಟಗಳನ್ನು ಬಹು ಪರಿಣಾಮಕಾರಿಯಾಗಿ ಓದುಗರ ಗಮನಕ್ಕೆ ತರುವಲ್ಲಿ ಗುರುಪ್ರಸಾದ್ ತೋರಿರುವ ಸಂಯಮ ಹಾಗೂ ಕಲೆಗಾರಿಕೆ ವಿಶೇಷವಾದುದು. ಈ ಕಥನಗಳ ಸಾಲಿಗೆ ಹೊಸ ಸೇರ್ಪಡೆ 'ಅಟ್ರಾಸಿಟಿ.'

ಜಾತಿಕಾರಣವಾಗಿ ನಡೆಯುವ ಶೋಷಣೆಯ ಕಥನಗಳು ಕನ್ನಡದಲ್ಲಿ ಸಾಕಷ್ಟು ಬಂದಿವೆ. ಗುರುಪ್ರಸಾದ್‌ರ 'ಅಟ್ರಾಸಿಟಿ' ಭಿನ್ನವೆನ್ನಿಸುವುದು, ಶೋಷಣೆಯನ್ನು ಹೊರಗಿನಿಂದ ಮಾತ್ರವಲ್ಲದೆ, ಒಳಗಿನಿಂದಲೂ ಕಾಣಿಸುವುದರಲ್ಲಿ.

ಕಾದಂಬರಿ ಆರಂಭಗೊಳ್ಳುವುದೇ ಕಸ ಬಳಿಯುವ ಪೌರ ಕಾರ್ಮಿಕ ಹಾಗೂ ಜಾತಿವ್ಯಸನಕ್ಕೆ ತುತ್ತಾದ ಹಿರಿಯ ಮಹಿಳೆಯೊಬ್ಬಳ ಮುಖಾಮುಖಿಯ ಮೂಲಕ. ಕಸದ ವಾಹನದ ಡ್ರೈವರ್ ಆಗಿ ನೇಮಕಗೊಂಡಿದ್ದರೂ ಜಾತಿಯ ಕಾರಣದಿಂದಾಗಿ ಕಸ ಬಳಿಯುವ ಅನಿವಾರ್ಯತೆಗೆ ಸಿಲುಕಿರುವುದು ಮಾತ್ರವಲ್ಲದೆ, ಕಸ ಸಂಗ್ರಹಿಸುವ ಕೆಲಸಕ್ಕೆ ನೇಮಕಗೊಂಡಿದ್ದರೂ ಜಾತಿಯ ಕಾರಣದಿಂದಾಗಿ ಚಾಲಕನ ಸೀಟಿನಲ್ಲಿ ಕೂರುವ ಅನುಕೂಲ ಹೊಂದಿರುವ ವ್ಯಕ್ತಿಯನ್ನು ಸಹಿಸಿಕೊಳ್ಳಬೇಕಾದ ಸಂಕಟವೂ ಇಲ್ಲಿದೆ. ಸಮಾಜದಲ್ಲಿ ಜಾತಿವ್ಯಸನವೇ ಕಸವಾಗಿ ತುಂಬಿಕೊಂಡ ಈ ಸಂಕಟದೊಂದಿಗೆ, ಕಥೆ ಅಂಬೇಡ್ಕರ್ ರೂಪಕದತ್ತ ಹೊರಳಿಕೊಳ್ಳುತ್ತದೆ. ಜಾತಿಯ ಕಾರಣದಿಂದಾಗಿ ನೋವು, ಕೀಳರಿಮೆ ಅನುಭವಿಸುತ್ತ, ಅನ್ಯಾಯಕ್ಕೊಳಗಾದವರ ಪಾಲಿಗೆ ಅಂಬೇಡ್ಕರ್ ಆತ್ಮವಿಶ್ವಾಸದ ಬಂಡವಾಳವಾಗಿ ಒದಗಿಬರುತ್ತಾರೆ. ಅದೇ ಕಾರಣಕ್ಕೆ, ಅಂಬೇಡ್ಕರ್ ಅವರನ್ನು ವೈಯಕ್ತಿಕ ನೆಲೆಯಲ್ಲಿ ಬಂಡವಾಳವನ್ನಾಗಿ ಬಳಸಿಕೊಳ್ಳುವವರೂ ಇದ್ದಾರೆ. ಅರಿವು ಅಸ್ಮಿತೆಯ ರೂಪದ ಅಂಬೇಡ್ಕರ್, ಸಮುದಾಯಕ್ಕೆ ಅಂತರ್ಜಲದಂತೆ ಒದಗಿಬರುತ್ತಾರೆ; ಕೆಲವೊಮ್ಮೆ ವೈಯಕ್ತಿಕ ಹಿತಸಾಧನೆಗೂ ಅಂಬೇಡ್ಕರ್ ಒದಗಿಬರುವ ವಿಪರ್ಯಾಸವನ್ನು ಕಾದಂಬರಿ ಕಾಣಿಸುತ್ತದೆ. ಅತ್ಯಾಚಾರಕ್ಕೊಳಗಾದ ಮಗಳಿಗೆ ನ್ಯಾಯ ಕೊಡಿಸಲು ಹೆಣಗುವ ತಾಯಿಯೊಬ್ಬಳು, ಅಸಹಾಯಕತೆಯಿಂದಾಗಿ ಕೈಚೆಲ್ಲುವ ಕ್ಷಣಗಳ ಚಿತ್ರಣ ಓದುಗರನ್ನು ವಿಷಣ್ಣರನ್ನಾಗಿಸುತ್ತದೆ.

ದಲಿತ ಚಳವಳಿಯ ಸಾರ್ಥಕತೆಯ ಜೊತೆಗೆ ದುರ್ಬಲ ಕ್ಷಣಗಳನ್ನೂ ನಿರ್ಮಮಕಾರದಿಂದ ಹಿಡಿದಿಡಲು ಹಂಬಲಿಸುವ ಕಾರಣದಿಂದಾಗಿ 'ಅಟ್ರಾಸಿಟಿ'ಗೆ ವಿಶೇಷ ಹೊಳಪು ದೊರೆತಿದೆ. ದಲಿತ ಚಳವಳಿಯ ಹೊಸ ಕೊಂಡಿಯಾಗಿಯೂ ಕಾದಂಬರಿಕಾರರು ಗುರ್ತಿಸಿಕೊಂಡವರು. ಹಾಗಾಗಿ, ಈ ಕಥನಕ್ಕೆ ಅಧಿಕೃತತೆಯೂ ಇದೆ. ದಲಿತ ಚಳವಳಿಯ ನಾಳೆಗಳು ಸುಶಿಕ್ಷಿತ ಯುವ ತಲೆಮಾರಿನ ಕೈಯಲ್ಲಿರುವುದನ್ನೂ ಈ ಕೃತಿ ಸೂಚ್ಯವಾಗಿ ಸಹೃದಯರ ಗಮನಕ್ಕೆ ತರುತ್ತಿದೆ.

ಕನ್ನಡ ಕಾದಂಬರಿಲೋಕ ಮಗ್ಗುಲು ಬದಲಿಸುತ್ತಿರುವ ಸಂದರ್ಭದಲ್ಲಿ ಪ್ರಕಟಗೊಂಡಿರುವ ಗುರುಪ್ರಸಾದ್‌ರ 'ಅಟ್ರಾಸಿಟಿ' ಹೆಚ್ಚಿನ ವಿಶ್ಲೇಷಣೆ–ಚರ್ಚೆಗಳಿಗೆ ಅರ್ಹವಾದ ಕೃತಿ.

**ಲೇ: ಗುರುಪ್ರಸಾದ್ ಕಂಟಲಗೆರೆ; ಪು: 114; ಬೆ: ರೂ. 130; ಪ್ರ: ಆದಿಜಂಬೂ ಪ್ರಕಾಶನ, ಫೋನ್: 8147416450.**